# ಮಹಿಳಾ ವಿಶೇಷ

ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ) ಮೈಸೂರು

ಸಂಪುಟ 1 ಸಂಚಿಕೆ 27 Volume 1 Issue 27
Email: mahilavishesha@yahoo.com
web:www.mahilavishesha.in

ಹೆಚ್.ವಿ. ವೆಂಕಟಸುಬ್ಬರಾವ್
ಸಂಪಾದಕರು
Mobile : 8880334444 / 9379777793

ಮಂಗಳವಾರ 01-03-2016
MAHILA VISHESHA

ಮೈಸೂರು
ಪುಟ 4
ಬೆಲೆ ₹ 2




ರಾಯಚೂರು ಜಿಲ್ಲಾ ಪಂಚಾಯಿತಿಗೆ ಆಯ್ಕೆಗೊಂಡ ಪಿ. ಶಿವಜ್ಯೋತಿಗೆ ಸಿಹಿಮುತ್ತು ನೀಡಿದ ಮಕ್ಕಳು

## ಸ್ವಯಂ ಸೇವಾ ಸಂಸ್ಥೆಗಳಿಂದ ಜಾಥಾ

ಮಾರ್ಚ್ 11 ರಿಂದ ಮೂರು ದಿನಗಳ ಕಾಲ ನಡೆಯಲಿರುವ ಆಯುಷ್ ಆವಾಜ್ ಕಾರ್ಯಕ್ರಮದ ಪೂರ್ವಭಾವಿಯಾಗಿ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನೇತೃತ್ವದಲ್ಲಿ ಲೆಟ್ಸ್ ಡೂ ಇಟ್ ಮೈಸೂರು, ಮೈರಾ ಸ್ಕೂಲ್ ಆಫ್ ಬಿಸ್‌ನೆಸ್ ಸೇರಿದಂತೆ ಇನ್ನಿತರ ಎನ್‌ಜಿಒ ಸಂಸ್ಥೆಗಳು ಶನಿವಾರ ನಗರದಲ್ಲಿ ಜಾಗೃತಿ ಜಾಥಾ ನಡೆಸಿದವು.

## ಸಿಇಟಿ ತರಬೇತಿ

**ಮೈಸೂರು ಸರಸ್ವತಿಪುರಂನಲ್ಲಿರುವ ಲಲಿತಾ ಅಕಾಡೆಮಿ ವತಿಯಿಂದ ಕ್ರಾಷ್ ಕೋರ್ಸ್, ಪಿಯು ಸಿಇಟಿ ತರಗತಿಗಳನ್ನು ನುರಿತ ಉಪನ್ಯಾಸಕರುಗಳಿಂದ ಇದೇ ತಿಂಗಳು ಮಾ. 30 ರಿಂದ ಏಪ್ರಿಲ್ 3 ರವರೆಗೆ ಹಮ್ಮಿಕೊಳ್ಳಲಾಗಿದೆ. ಇಚ್ಚಿಯುಳ್ಳ ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗೆ ಮೊ : 9379777793 ಸಂಪರ್ಕಿಸಬಹುದು.**

## 2016–17ನೇ ಬಜೆಟ್‌ನಲ್ಲಿ ಮಹಿಳೆಯರಿಗೇನೆನು ?



* ಮೊದಲ ಬಾರಿಗೆ ಮಹಿಳಾ ಉದ್ಯಮಿಗಳಿಗಾಗಿ 'ಸ್ಟ್ಯಾಂಡ್ ಆಫ್ ಇಂಡಿಯಾ' ಯೋಜನೆ
* ಬಡ ಕುಟುಂಬದ ಮಹಿಳಾ ಸದಸ್ಯರ ಹೆಸರಲ್ಲಿ ಎಲ್‌ಪಿಜಿ ಸಂಪರ್ಕ. ಇದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ 2,000 ಕೋಟಿ ರೂಪಾಯಿ ಮೀಸಲು. ಇದರಿಂದಾಗಿ 1.50 ಕೋಟಿ ಮನೆಗಳಿಗೆ ಪ್ರಯೋಜನ.
* ಎಸ್‌ಸಿ/ಎಸ್‌ಟಿ ಮಹಿಳಾ ಉದ್ಯಮಿಗಳ ಅಭಿವೃದ್ಧಿಗೆ 500 ಕೋಟಿ ರೂಪಾಯಿ.

## ಬಜೆಟ್ ಮೇಲಿನ ಅಭಿಪ್ರಾಯ

ಇದುವರೆಗೆ ಮಹಿಳಾ ಉದ್ಯಮಿಗಳಿಗಾಗಿ ಏನೂ ಕೊಟ್ಟಿರಲಿಲ್ಲ. ಈ ಬಾರಿ ಇಷ್ಟಾದರೂ ಕೊಟ್ಟಿರುವುದು ಸಮಾಧಾನ ತಂದಿದೆ. ಆದರೆ, ಇಲ್ಲಿ ಪ್ರತ್ಯೇಕವಾಗಿ ಮಹಿಳೆಗೆಂದು ಸೇರಿಸಿಲ್ಲ. ಪರಿಶಿಷ್ಟ ಜಾತಿ, ಪಂಗಡ ಹಾಗೂ ಮಹಿಳಾ ಉದ್ಯಮಿಗಳನ್ನು ಸೇರಿಸಲಾಗಿದೆ. ರೈತರಿಗೆ ಉತ್ತೇಜನ ಕೊಡುವಂತೆ ಮಹಿಳಾ ಉದ್ಯಮದಾರರಿಗೆ, ರೈತ ಮಹಿಳೆಯರಿಗೂ ಸಮಾನವಾಗಿ ಸೌಲಭ್ಯ ಕೊಡಬೇಕೆಂದು ಅವೇಕ್ ಅಧ್ಯಕ್ಷೆ ಜ್ಯೋತಿ ಬಾಲಕೃಷ್ಣ ಅಭಿಪ್ರಾಯವಾಗಿದೆ.

## ಸ್ವಯಂ ಉದ್ಯೋಗ ತರಬೇತಿ

ಹೊಲಿಗೆ, ಬ್ಯೂಟಿಷಿಯನ್, ಫ್ಯಾಷನ್ ಡಿಸೈನಿಂಗ್ ಹಾಗೂ ಬ್ಯಾಗ್ ಮೇಕಿಂಗ್‌ನಲ್ಲಿ 6 ತಿಂಗಳ ಸ್ವಂಯಂ ಉದ್ಯೋಗ ತರಬೇತಿಗಾಗಿ ಮಹಿಳೆಯರು, ಗೃಹಿಣಿಯರು ಮತ್ತು ನಿರುದ್ಯೋಗಿ ಯುವತಿಯರಿಂದ ಅರ್ಜಿ ಆಹ್ವಾನಿ ಸಿರುವುದಾಗಿ ರೋಟರಿ ಮೈಸೂರು ಪಶ್ಚಿಮ ಸಂಸ್ಥೆಯನ್ನು ವೃತ್ತಿ ತರಬೇತಿ ಅಧ್ಯಕ್ಷ ದಿನೇಶ್‌ಕುಮಾರ್ ತಿಳಿಸಿದ್ದಾರೆ. ಆಸಕ್ತರು ಮೊ.ಸಂ. 9480691046 ಸಂಪರ್ಕಿಸ ಬಹುದು ಎಂದು ಅವರು ಹೇಳಿದ್ದಾರೆ.

## ಅನನ್ಯ ಸಾಧನೆ ಜೈವಿಕ ಪ್ಲಾಸ್ಟಿಕ್ ಶೋಧಿಸಿದ ಯಗಟಿಯ ಬಾಲಕಿ

ಪ್ಲಾಸ್ಟಿಕ್ ಬಗ್ಗೆ ಯಾವಾಗಲೂ ಇರುತ್ತೇವೆ. ಅದು ರಾಸಾಯನಿಕಯುಕ್ತವಾಗಿದೆ. ಮಣ್ಣಿನಲ್ಲಿ ಕರಗುವುದಿಲ್ಲ. ಹರಿಸರಕ್ಕೆ ಅದರಿಂದ ಹಾನಿಯಾಗುತ್ತಿದೆ ಇತ್ಯಾದಿ ಇಂಥ ಅಪಾಯಕಾರಿ ಪ್ಲಾಸ್ಟಿಕ್ ಬದಲು ಮಣ್ಣಿನಲ್ಲಿ ಕರಗಬಲ್ಲ ಪ್ಲಾಸ್ಟಿಕ್ ಇರುತ್ತಿದ್ದರೆ ಚೆನ್ನಾಗಿತ್ತು. ಎಂದು ಹಲವು ಸಲ ಅನಿಸಿದ್ದೂ ಇದೆ. ಈಗ ಅದನ್ನೂ ತಯಾರಿಸಲು ಸಾಧ್ಯ ಎಂಬುದು ಗೊತ್ತಾಗಿದೆ. ಈ ಸಂಶೋಧನೆ ಮಾಡಿದವರು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿ!. ನಿಜ, ಪ್ಲಾಸ್ಟಿಕ್'ಗೆ ಬದಲಾಗಿ ಜೈವಿಕ ಪ್ಲಾಸ್ಟಿಕ್ ಹಾಳೆಗಳನ್ನು ಚಿಕ್ಕಮಂಗಳೂರು ಜಿಲ್ಲೆಯ ಕಡೂರಿನ ಯಗಟಿ ಗ್ರಾಮದ ವಿದ್ಯಾರ್ಥಿನಿ ಅನನ್ಯ ವೈ.ಆರ್. ಸಿದ್ಧಪಡಿಸಿದ್ದಾರೆ. ಕಡೂರಿನ ದೀಕ್ಷಾ ವಿದ್ಯಾಮಂದಿರದ ವಿದ್ಯಾರ್ಥಿನಿಯಾಗಿರುವ ಅನನ್ಯ ಈ ಸಾಧನೆಗಾಗಿ ಪದಕವನ್ನೂ ಪಡೆದಿದ್ದಾರೆ. ಈ ಪ್ಲಾಸ್ಟಿಕ್ ಹಾಳೆಗಳನ್ನು ಇನ್ನಷ್ಟು ಅಭಿವೃದ್ಧಿಪಡಿಸಿ, ಪೇಟೆಂಟ್ ಪಡೆಯುವ ತಯಾರಿಯಲ್ಲೂ ಅವರಿದ್ದಾರೆ. ಇವರ ಈ ಸಾಧನೆಗೆ ಮಾರ್ಗದರ್ಶನ ನೀಡಲು ಕೇಂದ್ರ ಸರ್ಕಾರದ ವಿಜ್ಞಾನ, ತಂತ್ರಜ್ಞಾನ ಇಲಾಖೆಯು ವಿಜ್ಞಾನಿ ಪ್ರೊ. ವಿಜಯ್ ಅವರನ್ನು ನೇಮಿಸಿದೆ.

## ಮಹಿಳಾ ವಿವಿಗೆ 'ಬಿ' ಗ್ರೇಡ್

ರಾಷ್ಟ್ರೀಯ ಮೌಲ್ಯಾಂಕನ ಮಾನ್ಯತಾ ಮಂಡಳಿ (ನ್ಯಾಕ್) ಕರ್ನಾಟಕ ರಾಜ್ಯ ಮಹಿಲಾ ವಿಶ್ವವಿದ್ಯಾಲಯಕ್ಕೆ ಬಿ.ಗ್ರೇಡ್ ನೀಡಿದೆ. ಕಳೆದ ಜನವರಿ 20ರಿಂದ24 ರವರೆಗೆ ನ್ಯಾಕ್‌ನ ಉನ್ನತ ಮಟ್ಟದ ತಜ್ಞರ ತಂಡ ಮಹಿಳಾ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತ್ತು. ಮಹಿಳಾ ವಿವಿಯ ಮೂಲ ಸೌಲಭ್ಯಗಳು, ಕಲಿಕೆ ಮತ್ತು ಬೋಧನೆಯಲ್ಲಿನ ನೂತನ ಆವಿಷ್ಕಾರಗಳು, ಆಡಳಿತ ವ್ಯವಸ್ಥೆ ಮುಂತಾದ ಸಂಗತಿಗಳನ್ನು ಪರಿಗಣಿಸಿ ನ್ಯಾಕ್ ಬಿ. ಗ್ರೇಡ್ ನೀಡಿದೆ. ಕುಲಪತಿ ಪ್ರೊ. ಮೀನಾ ಚಂದಾವರಕರ ಅವರೊಂದಿಗೆ ಸುದೀರ್ಘ ಚರ್ಚೆ ನಡೆಸಿದ್ದ ತಜ್ಞರ ತಂಡ ವಿವಿಯ ವಿವಿಧ ಚಟುವಟಿಕೆಗಳು, ಬೆಳವಣಿಗೆ, ಮೂಲ ಸೌಲಭ್ಯಗಳು, ಸಾಧನೆಗಳ ಕುರಿತು ಮಾಹಿತಿ ಪಡೆದುಕೊಂಡಿತ್ತು. ವಿವಿಯ ಸಿಂಡಿಕೇಟ್ ಸದಸ್ಯರು, ವಿದ್ಯಾರ್ಥಿಗಳು, ಹಳೆಯ ವಿದ್ಯಾರ್ಥಿಗಳು, ಪಾಲಕರ, ಜತೆಗೂ ನ್ಯಾಕ್ ತಜ್ಞರ ತಂಡ ಸಮಾಲೋಚನೆ ನಡೆಸಿತ್ತು.

## ಕನ್ನಡದಲ್ಲಿ ಭಾಷಣ

ವೀರ ಕಿತ್ತೂರು ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಭೂಮಿಗೆ ಪ್ರಣಾಮಗಳು. ಕರ್ನಾಟಕದ ರೈತ ಬಂಧು–ಭಗಿನಿಯರೇ ನಿಮಗೆಲ್ಲ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲಿ ಪ್ರಧಾನಿ ನರೇಂದ್ರ ಮೋದಿ ಭಾಷಣ ಆರಂಭಿಸಿದಾಗ, ಸಭಿಕರು ಚಪ್ಪಾಳೆ ಹೊಡೆದು ಸಂಭ್ರಮಿಸಿದರು.

## ಸುರೇಖಾಗೆ ಪಿಎಚ್‌ಡಿ ಪದವಿ

ಗಣಿತ ವಿಷಯದಲ್ಲಿ ಡಾ. ಚಂದ್ರಶೇಖರ್ ಅಡಿಗ ಅವರ ಮಾರ್ಗ ದರ್ಶನದಲ್ಲಿ ಎಂ.ಎಸ್. ಸುರೇಖಾ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿ.ವಿ.ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ.

## ನಗರದ ಶ್ರೀ ವಾಣಿಜ್ಯ ವಿದ್ಯಾಸಂಸ್ಥೆಗೆ 8 ಡಿಸ್ಟಿಂಕ್ಷನ್

ನಗರದ ಶ್ರೀ ವಾಣಿಜ್ಯ ಮತ್ತು ಕಂಪ್ಯೂಟರ್ ವಿದ್ಯಾಸಂಸ್ಥೆಗೆ ಕರ್ನಾಟಕ ಪ್ರೌಢಶಾಲಾ ಪರೀಕ್ಷಾ ಮಂಡಳಿ ಜನವರಿಯಲ್ಲಿ ನಡೆಸಿದ ಟೈಪಿಂಗ್ ಪರೀಕ್ಷೆಯಲ್ಲಿ 8 ಡಿಸ್ಟಿಂಕ್ಷನ್ ದೊರೆತಿವೆ.



ನಟಿ ರಾಗಿಣಿ ದ್ವಿವೇದ್ ಬೆಂಗಳೂರು ಯುವ ಜನೋತ್ಸವದಲ್ಲಿ ಪಾಲ್ಗೊಂಡು ಯುವತಿಯರೊಂದಿಗೆ ಸಂಭ್ರಮಿಸುತ್ತಿರುವ ದೃಶ್ಯದ ಫೋಟೋ

## ಉಚಿತ ಇಂಗ್ಲಿಷ್ ಕಲಿಕೆ ಕಂಪ್ಯೂಟರ್ ವ್ಯಕ್ತಿತ್ವ ವಿಕಸನ ಶಿಬಿರ

ಮೈಸೂರಿನ ಸರಸ್ವತಿಪುರಂ ಬೇಕ್ ಪಾಯಿಂಟ್ ಬಳಿ ಇರುವ ಜಿ–ಟ್ರ್ಯಾಕ್ ಸಂಸ್ಥೆಯಲ್ಲಿ ಆರಂಭಿಸಲಾಗುತ್ತಿದೆ. ಶಿಬಿರದಲ್ಲಿ ಕಂಪ್ಯೂಟರ್ ತರಬೇತಿ, ಇಂಗ್ಲಿಷ್‌ನಲ್ಲಿ ಮಾತನಾಡುವಿಕೆ ಹಾಗೂ ವ್ಯಕ್ತಿತ್ವ ವಿಕಸನದ ಬಗ್ಗೆ ತರಬೇತಿ ನೀಡಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ, ಪಿಯುಸಿ ಹಾಗೂ ಯಾವುದೇ ಪದವಿ ಪಡೆದಿರುವ 18 ವರ್ಷ ಮೇಲ್ಪಟ್ಟ ಮಹಿಳೆಯರು ಹಾಗೂ ವಿಶೇಷ ಚೇತನರು ತರಬೇತಿ ಶಿಬಿರದಲ್ಲಿ ಪಾಲ್ಗೊಳ್ಳ ಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ 9591343563, 9980088668ನ್ನು ಸಂಪರ್ಕಿಸಬಹುದಾಗಿದೆ.

**ಒಂದು ಹನಿ ನೀರು ತೀರ್ಥಕ್ಕೆ ಸಮಾನ**
**ನೀರನ್ನು ಹಿತವಾಗಿ, ಮಿತವಾಗಿ ಬಳಸಿ**

## ಗುಣಮುಖರಾಗಿ ಮನೆಗೆ ಮರಳಿದ ಪ್ರಧಾನಿ ತಾಯಿ

ಅನಾರೋಗ್ಯದ ಹಿನ್ನೆಲೆಯಲ್ಲಿ ಬುಧವಾರ ಆಸ್ಪತ್ರೆಗೆ ದಾಖಾಲಾಗಿದ್ದ ಪ್ರಧಾನಿ ನರೇಂದ್ರ ಮೋದಿ ತಾಯಿ ಹೀರಾ ಬೆನ್ ಗುಣ ಮುಖರಾಗಿದ್ದು ಶನಿವಾರ ಮನೆಗೆ ಮರಳಿದ್ದಾರೆ. 95 ವರ್ಷದ ಹೀರಾ ಬೆನ್‌ರಿಗೆ ಎದೆ ನೋವು ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಗಾಂಧಿನಗರದ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರಿಗೆ ಉಸಿರಾಟದ ಸಮಸ್ಯೆ ಕಾಣಿಸಿಕೊಂಡಿತ್ತು. ಎಕ್ಸ್ ರೇ, ರಕ್ತದೊತ್ತಡ ಮತ್ತು ಇಸಿಜಿ ನಡೆಸಿದ್ದು ಯಾವುದೇ ಗಂಭೀರ ಸಮಸ್ಯೆಯಿಲ್ಲ ಎಂದು ಆಸ್ಪತ್ರೆ ಸೂಪರಿಂಟೆಂಡೆಂಟ್ ಡಾ. ಬಿಪಿನ್ ನಾಯಕ್ ಹೇಳಿದ್ದಾರೆ. ಚೇತರಿಸಿಕೊಂಡ ನಂತರ ಶನಿವಾರ ಹೀರಾಬೆನ್‌ರನ್ನು ಮನೆಗೆ ಕರೆದೊಯ್ಯಲಾಗಿದೆ. ಗುಜರಾತ್‌ನ ಗಾಂಧಿನಗರದಲ್ಲಿ ಮೋದಿ ಸೋದರ ಪಂಕಜ್‌ರ ಜತೆ ಹೀರಾ ಬೆನ್ ವಾಸಿಸುತ್ತಿದ್ದಾರೆ. ಚೇತರಿಸಿಕೊಂಡ ಬಳಿಕ ಮಾತನಾಡಿದ ಹೀರಾ ಬೆನ್, ನನ್ನ ಆರೋಗ್ಯದ ಬಗ್ಗೆ ಚಿಂತಿಸಬೇಡ. ನಿನ್ನ ಗುರಿಯತ್ತ ಮುನ್ನಡೆ ಎಂದು ಮೋದಿಗೆ ಹೇಳಿದ್ದಾಗಿ ತಿಳಿಸಿದ್ದಾರೆ.



ತಮಿಳುನಾಡಿನ ಕುಂಭಕೋಣಂನಲ್ಲಿ ಮಹಾಮಹಂ ತೀರ್ಥವಾರಿ ಉತ್ಸವ ದಕ್ಷಿಣಭಾರತದ ಕುಂಭಮೇಳವೆಂದೆ ಪ್ರಖ್ಯಾತಿ



ಮೈಸೂರಿನ ಜೆಎಸ್‌ಎಸ್ ಬಡಾವಣೆಯ ರಾಜಕುಮಾರ ರಸ್ತೆ ಬಳಿ ನಡೆದ ಸತ್ಯನಾರಾಯಣಪೂಜೆಯಲ್ಲಿ ಪಾಲ್ಗೊಂಡಿದ್ದ ದಂಪತಿಗಳು

**ಅಮೃತವಾಣಿ !**



ಪ್ರೀತಿಯಲ್ಲಿ ನಲಿವಿದೆ
– ತೀವ್ರವಾದ ನೋವಿದೆ
ನೋವು ನಲಿವೆರಡರಲ್ಲೂ
– ಜೀವರಸದ ಬೆಲೆಯಿದೆ.

**ಸಾರಾಯಿ**



**ಕುಡಿದಾಗ ಜನರು ಸಾರಾಯಿ**
**ಆಗುವರು ಊರಲ್ಲಿ ಸಿಪಾಯಿ**
**ಇಳಿದಾಗ ತಲೆಯಿಂದ ಸಾರಾಯಿ**
**ಆಗುವರು ಬಾಲ ಮುದುರಿದ ನಾಯಿ**

**ನಗು**



ನಗುತ್ತಲೇ ವಿಜಯ ಸಾಧಿಸುವವನು ಬುದ್ಧಿವಂತ
ಗೆದ್ದರೂ ಸೋತರೂ ನಗುವವನು ಕರ್ಮಯೋಗಿ
ಇನ್ನೊಬ್ಬರಿಗೆ ನೋವಾಗುವಂತೆ ನಗುವವನು ಖಳನಾಯಕ.

**ಹಿಡಿತ**

ಹೊರಗಿನ ಶತ್ರುಗಳನ್ನು ಗೆಲ್ಲಬಹುದು, ಆದರೆ ಒಳ ವೈರಿಗಳು ನಿಜವಾಗಿಯೂ ಅಪಾಯಕಾರಿ



– ಇಂದಿರಾಗಾಂಧಿ

## ಶುಶ್ರೂಷಕರ ಹುದ್ದೆ ನೇಮಕ ಮೆರಿಟ್ ಪಟ್ಟಿ ಪ್ರಕಟ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಸರ್ಕಾರಿ ಮತ್ತು ಸ್ವಾಯತ್ತ ಸಂಸ್ಥೆಗಳಲ್ಲಿನ ಶುಶ್ರೂಷಕರ ಹುದ್ದೆ ನೇಮಕಾತಿ ಸಂಬಂದ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಯ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಗುರುವಾರ ಪ್ರಕಟಿಸಿದೆ. ಅಭ್ಯರ್ಥಿಗಳು ಗಳಿಸಿದ ಅಂಕಗಳ ವಿವರಗಳ ಸಹಿತ ತಾತ್ಕಾಲಿಕ ಮೆರಿಟ್ ಪಟ್ಟಿಯನ್ನು ಸಂಸ್ಥೆಗಳು ಮತ್ತು ಪ್ರವರ್ಗವಾರು ವಿವರಗಳಿಗೆ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in/ ನೋಡಬಹುದು.

## ಪ್ಯಾರಮೆಡಿಕಲ್ ಹುದ್ದೆಗಳ ನೇಮಕಕ್ಕೆ ಅರ್ಜಿ ಆಹ್ವಾನ

ಸೆಂಟ್ರಲ್ ಇಸರ್ವ್ ಪೊಲೀಸ್ ಫೋಸ್ ನಲ್ಲಿ ಖಾಲಿ ಇರುವ ವಿವಿಧ ಪ್ಯಾರ ಮೆಡಿಕಲ್ ಹುದ್ದೆಗಳಿಗೆ ಅರ್ಹ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಪಿಯುಸಿಯೊಂದಿಗೆ 3.5 ವರ್ಷದ ನರ್ಸಿಂಗ್ ಮತ್ತು ಮಿಡ್ ವೈಫರಿ ಕೋರ್ಸ್‌ನಲ್ಲಿ ತೇರ್ಗಡೆ ಯಾದ 18 ರಿಂದ 30 ವರ್ಷದೊಳಗಿನವರು ಸಬ್ ಇನ್ಸ್‌ಪೆಕ್ಟರ್ ಸ್ಟಾಫ್ ನರ್ಸ್ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಪಿಯುಸಿಯಲ್ಲಿ ವಿಜ್ಞಾನ ವಿಷಯದೊಂದಿಗೆ ರೇಡಿಯೋ ಡಯಾಗ್ನಸಿಸ್ ವಿಷಯದಲ್ಲಿ 2 ವರ್ಷದ ಡಿಪ್ಲೊಮೊ ಕೋರ್ಸ್ ತೇರ್ಗಡೆಯಾದ 18 ರಿಂದ 30 ವರ್ಷದೊಳಗಿನವರು ಸಬ್ ಇನ್ಸ್‌ಪೆಕ್ಟರ್ ರೇಡಿಯೋಗ್ರಾಫರ್ ಹುದ್ದೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಮೂಲಕ ಮಾರ್ಚ್ 23 ರೊಳಗೆ ಅರ್ಜಿ ಸಲ್ಲಿಸಬೇಕು. ಮಾಹಿತಿಗಾಗಿ ಮೈಸೂರು ವಿವಿ ಉದ್ಯೋಗ ಮಾಹಿತಿ ಮತ್ತು ಮಾರ್ಗದರ್ಶನ ಕೇಂದ್ರ ಸಂಪರ್ಕಿಸಲು ಕೋರಲಾಗಿದೆ.

## ರಕ್ಷಣಾ ಸಚಿವಾಲಯದ ಎಪಿಒನಲ್ಲಿ ಗ್ರೂಪ್ ಸಿ ಹುದ್ದೆಗಳಿಗೆ ನೇಮಕಾತಿ

ದೇಶದ ರಕ್ಷಣಾ ಸಚಿವಾಲಯದ 14 ಎಫ್‌ಎಡಿ/ಎಪಿಒ ಘಟಕದಲ್ಲಿನ ಗ್ರೂಪ್ ಸಿ ಹುದ್ದೆಗಳಿಗೆ ನೇಮಕಾತಿ ನಡೆಯುತ್ತಿದೆ. ಟ್ರೇಡ್ಸ್‌ಮ್ಯಾನ್‌ಮೇಟ್, ಫೈರ್‌ಮ್ಯಾನ್, ಮೆಟೀರಿಯಲ್ ಅಸಿಸ್ಟೆಂಟ್ ಸೇರಿ ವಿವಿಧ ವಿಭಾಗಗಳಲ್ಲಿನ ಹುದ್ದೆಗಳ ಭರ್ತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ತಲುಪಲು ಮಾ.11 ಕೊನೇ ದಿನ.

## ರೂಪಾಗೆ ಪಿಎಚ್‌ಡಿ

ಡಾ. ಉಮಾ ಎಚ್. ಆರ್ ಅವರ ಮಾರ್ಗ ದರ್ಶನದಲ್ಲಿ ರೂಪಾ ಕೆ.ಎನ್. ಸಾದರಪಡಿಸಿದ ಪ್ರೌಢಪ್ರಬಂಧವನ್ನು ಮೈಸೂರು ವಿವಿ ಪಿಎಚ್‌ಡಿ ಪದವಿಗೆ ಅಂಗೀಕರಿಸಿದೆ.

**How to succed in life**

Dress - Smartly
Work - Patiently
Behave - Decently
Earn - Honestly

-cont'd

**Secret of Albhabets**

D - Do Directly
E - Eat Slowly
F - For Faithfully
g - Go Generally

-cont'd

## ಮಹಿಳಾ ಸಬಲೀಕರಣ

**ನಾಗಲಕ್ಷ್ಮಿ ಕೆ.ಎಸ್.**

ಪ್ರಾಚೀನ ಭಾರತದಲ್ಲಿ ಮಹಿಳೆಗೆ ಸಮಾಜದಲ್ಲಿ ಪ್ರಾಧಾನ್ಯತೆ ಇತ್ತು. ಪುರುಷರಿಗೆ ಸಮಾನವಾಗಿ ಮಹಿಳೆಗೂ ಪ್ರಾಶಸ್ತ್ಯ ನೀಡಲಾಗುತ್ತಿತ್ತು. ಹಲವು ಮಹಿಳೆಯರು ಪಾಂಡಿತ್ಯ ಹೊಂದಿದವರಾಗಿದ್ದು, ವೇದಗಳಲ್ಲಿ ಕೆಲವು ಸ್ತೋತ್ರ ರಚನೆಗಳನ್ನು ಸಹ ಮಾಡಿರುವ ಬಗ್ಗೆ ಮಾಹಿತಿಗಳಿವೆ. ರಾಮಾಯಣ ಹಾಗೂ ಮಹಾಭಾರತಗಳ ಕಾಲಗಳಲ್ಲಿಯೂ ಮಹಿಳೆಯರು ಸೌಶೀಲ್ಯ, ಬುದ್ಧಿವಂತಿಕೆ ಹಾಗೂ ಜವಾಬ್ದಾರಿಯುತ ನಿರ್ಧಾರಗಳನ್ನು ತೆಗೆದು ಕೊಂಡು ಬದುಕಿರುವ ಬಗ್ಗೆ ನಿದರ್ಶನಗಳಿವೆ. ಚರಿತ್ರೆಯಲ್ಲಿ ತಿಳಿದುಬರುವಂತೆ 'ಮೆಡಿಯ ವೇಲ್' ಕಾಲದಲ್ಲಿ ಅದು ಹೇಗೋ ಮಹಿಳೆಯನ್ನು ಹಿಂದಕ್ಕೆ ತಳ್ಳಲ್ಪಟ್ಟಿದೆ. ಶಿಕ್ಷಣ ವಂಚಿತ, ಅವಕಾಶವಂಚಿತರಾಗಿ ನಾಲ್ಕು ಗೋಡೆಗಳ ನಡುವೆ ಪುರುಷನ ದಬ್ಬಾಳಿಕೆಯಲ್ಲಿ ಬದುಕುವಂತಾಗಿದ್ದು ದುರ್ದೈವ. ಈ ರೀತಿಯ ಮಹಿಳೆಯ ಮೇಲಿನ ದೌರ್ಜನ್ಯ ಪಾಶ್ಚಿಮಾತ್ಯ ದೇಶಗಳಲ್ಲಿ ಇದ್ದಿತ್ತಾದಾರೂ, ಅಲ್ಲಿನ ಮಹಿಳೆಯರು ಅವರ ಹಕ್ಕನ್ನು ಬಹಳ ಹಿಂದೆಯೇ ಪಡೆದುಕೊಂಡಿದ್ದಾರೆಂದರೆ ತಪ್ಪಾಗಲಾರದು. ಆದರೆ ಭಾರತದಲ್ಲಿ ಇಂದಿಗೂ ಮಹಿಳೆಯ ತಿರಸ್ಕಾರಕ್ಕೊಳಗಾಗಿಯೇ ಬದುಕುತ್ತಿರುವುದು ವಿಷಾದನೀಯ.



ಭಾರತದಲ್ಲಿ 2001ನೇ ವರ್ಷವನ್ನು 'ಮಹಿಳಾ ಸ್ವಾವಲಂಬನೆ ವರ್ಷ'ವೆಂದೇ ಆಚರಿಸಲು ಕೇಂದ್ರ ಸರ್ಕಾರ ಘೋಷಿಸಿತ್ತು. ಮಹಿಳೆಯ ಮನೆಯೊಳಗೆ ಎದುರಿಸುತ್ತಿರುವ ಹಿಂಸೆಯನ್ನು ತಡೆಯಲೆಂದೇ ಹೊಸ ಕಾನೂನೊಂದನ್ನು 'ಸಮಗ್ರ ಮಹಿಳೆಯರ ಅಭಿವೃದ್ಧಿ ಯೋಜನೆ' ಯನ್ನೂ ಸಹ ಆರಂಭಿಸಿದೆ. ಮಹಿಳೆಯರ ಹಿತರಕ್ಷಣೆಗೆಂದೇ ಕಾನೂನುಗಳೇನೋ ಇದ್ದರೂ ಅವು ಪರಿಣಾಮಕಾರಿಯಾಗಿಲ್ಲ ಎಂಬುದೂ ಅಷ್ಟೇ ಕಟು ಸತ್ಯ ಮಹಿಳೆಯರ ಆರ್ಥಿಕ, ಸಾಮಾಜಿಕ, ಸ್ವಾವಲಂಬನೆಗೆ ಒತ್ತುಕೊಡುವುದರೊಂದಿಗೆ ಆರೋಗ್ಯ, ಶಿಕ್ಷಣ, ಗೃಹದೌರ್ಜನ್ಯ ತಡೆ ಮುಂತಾದ ಕಡೆ ಗಮನಹರಿಸಬೇಕಾಗಿದೆ. ಸಾಮಾಜಿಕ ಚಟುವಟಿಕೆಗಳು ಮತ್ತು ಸಾಮಾಜಿಕ ಯೋಜನೆಗಳಲ್ಲಿ ಮಹಿಳೆಯರು ಪಾಲ್ಗೊಳ್ಳುವುದನ್ನು ಉತ್ತೇಜಿಸಬೇಕು. ಗೃಹದೌರ್ಜನ್ಯಕ್ಕೆ ಸಂಬಂಧಿಸಿದಂತೆ ಕಾನೂನುಗಳನ್ನೇನೋ ರಚಿಸಿದ್ದಾಗ್ಯೂ, ಕಾರ್ಯಗತಗೊಳಿಸುವ ನ್ಯೂನತೆಗಳಿದ್ದು, ಮಹಿಳೆಯು ಪದೇ ಪದೇ ಒಂದಲ್ಲ ಒಂದು ರೀತಿಯಲ್ಲಿ ದೌರ್ಜನ್ಯಕ್ಕೆ ಒಣಗುತ್ತಿರುವುದು ದುರದೃಷ್ಟಕರ. ಇದಕ್ಕಾಗಿ ಸ್ವಸಹಾಯ ಗುಂಪುಗಳು ಸಕ್ರಿಯವಾಗಿ ತೊಡಗುವಿಕೆಯ ಅವಶ್ಯಕತೆಯಿದೆ. ಮಹಿಳಾ ಸಬಲೀಕರಣದ ಪರಿಕಲ್ಪನೆಯನ್ನು ಅರ್ಥಮಾಡಿಕೊಳ್ಳುವ ಮೊದಲು ಸಬಲೀಕರಣ ಪದದ ಅರ್ಥ ತಿಳಿದುಕೊಳ್ಳೊಣ. ಆಂಗ್ಲಪದದ 'Empowerment' ಅಂದರೆ ಕನ್ನಡದಲ್ಲಿ 'ಬಲಕೋಡು', 'ಅಧಿಕಾರ ವಹಿಸು' ಕಾನೂನಿನ ಹಕ್ಕುಗಳನ್ನು ನೀಡು' ಎಂಬುದಾಗಿದ್ದು, ವ್ಯಕ್ತಿಯನ್ನು ಬಲಗೊಳಿಸುವುದು ಎಂಬ ಅರ್ಥವನ್ನು ಕೊಡುತ್ತದೆ. ಮಹಿಳೆಯರ ಪರಾಧೀನತೆ ಹಾಗೂ ತುಳಿತಕ್ಕೆ ಸೈದ್ಧಾಂತಿಕ ಹಿನ್ನೆಲೆಯಲ್ಲಿ ಸ್ತ್ರೀವಾದಿ ಸಿದ್ಧಾಂತಗಳು ಹುಟ್ಟಿಕೊಂಡವು. ಇದು



ಸ್ತ್ರೀ ಪುರುಷರ ನಡುವಿನ ಅಸಮಾನತೆಯನ್ನು ಸ್ವಾಭಾವಿಕ ಮತ್ತು ಅನಿವಾರ್ಯವೆಂಬುದನ್ನು ಒಪ್ಪಿಕೊಳ್ಳುವುದಿಲ್ಲ. ಸಮಾಜದಲ್ಲಿ ಉದ್ಯೋಗದಲ್ಲಿ ಹಾಗೂ ಕುಟುಂಬದಲ್ಲಿನ ವ್ಯವಸ್ಥೆಗಳು ಮಹಿಳೆಯರ ತುಳಿತ ಮತ್ತು ಶೋಷಣೆಗೆ ಪೂರಕವಾಗಿದ್ದು, ಇದರ ವಿರುದ್ಧ ಪ್ರಜ್ಞಾಪೂರಕವಾಗಿ ಕ್ರಮ ಕೈಗೊಳ್ಳಬೇಕಾಗಿದೆ. ಮಹಿಳಾ ಸಬಲೀಕರಣಕ್ಕಾಗಿ ಬರೀ ಪುಸ್ತಕದಲ್ಲಿನ ಕಾನೂನು, ಕಾಯ್ದೆಗಳಿಂದಾಗಲೀ ಕ್ರಾಂತಿಕಾರಕ ಧೋರಣೆಗಳಿಂದಾಗಲೀ ಸಾಧ್ಯವಿಲ್ಲ. ಬದಲಾಗಿ ಸಾಮಾಜಿಕ ಮೌಲ್ಯಗಳ ಬದಲಾವಣೆಗಳು ಹಾಗೂ ಸುಧಾರಣಾವಾದಿ ಧೋರಣೆಗಳಿಂದ ಹಾಗೂ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ವ್ಯವಸ್ಥೆ ಆಗಬೇಕಾಗಿದೆ. ಒಂದು ದೃಷ್ಟಿಯಲ್ಲಿ ಕುಟುಂಬವೇ ಮಹಿಳೆಯರ ತುಳಿತದ ಕೇಂದ್ರಬಿಂದುವಾಗಿದೆ. ಕುಟುಂಬವು ಪುರುಷ ಪ್ರಧಾನ ವ್ಯವಸ್ಥೆಯ ಒಂದು ಅಂಗವಾಗಿ ಮಹಿಳೆಯನ್ನು ಲೈಂಗಿಕವಾಗಿ, ಆರ್ಥಿಕವಾಗಿ ಹಾಗೂ ಮಾನಸಿಕವಾಗಿ ತುಳಿಯುತ್ತಿದೆ ಎಂದರೆ ತಪ್ಪಾಗಲಾರದು. ಸ್ತ್ರೀ ಪುರುಷರ ನಡುವಿನ ಅಸಮಾನತೆ ಸಮಾಜದ ಒಂದು ವಿಪರ್ಯಾಸ. ಇದಕ್ಕೆ ಪುರುಷಶಕ್ತಿಯೇ ಮೂಲಾಧಾರವಾಗಿದೆ.

**ಮುಂದುವರಿಯುವುದು.....**

## ಖಾಲಿ ಇರುವ ಹುದ್ದೆಗಳಿಗೆ ಅರ್ಜಿ

ರೈಲ್ವೆ ಇಲಾಖೆಯಡಿ ಕಾರ್ಯನಿರ್ವಹಿಸುವ ರೈಲ್ವೆ ರಕ್ಷಣಾ ಪಡೆಯ ದಕ್ಷಿಣ ಕೇಂದ್ರೀಯ ರೈಲ್ವೆ ಆರ್‌ಪಿಎಫ್/ ಆರ್‌ಪಿಎಸ್‌ಎಫ್ (ರೈಲ್ವೆ ರಕ್ಷಣಾ ವಿಶೇಷ ಪಡೆ) ನಲ್ಲಿ ಕಾನ್‌ಸ್ಟೇಬಲ್ ಹುದ್ದೆಗಳ ಭರ್ತಿಗೆ ಅರ್ಹ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಿದೆ. ಅರ್ಜಿಸಲ್ಲಿಸಲು ಕೊನೆಯ ದಿನಾಂಕ 01.03.2016 ಹೆಚ್ಚಿನ ಮಾಹಿತಿಗೆ ವೆಬ್‌ಸೈಟ್: www.rpfonlinereg.in/ www.scr.indianraliways.gov.in

## ಖಾಲಿ ಇರುವ ಹುದ್ದೆಗಳಿಗೆ ಅರ್ಜಿ

ವಿವಿಧ ಸಾರ್ವಜನಿಕ ಇಲಾಖೆ, ಸಚಿವಾಲಯ/ ಸಂಸ್ಥೆಗಳಲ್ಲಿ ಸಿಬ್ಬಂದಿ ನೇಮಕಾತಿ ಮಾಡಿಕೊಳ್ಳಲು ಎಸ್‌ಎಸ್‌ಸಿ ಕಂಬೈನ್ಡ್ ಗ್ರ್ಯಾಜುಯೇಟ್ ಲೆವೆಲ್ ಪರೀಕ್ಷೆಗೆ ಅರ್ಹ ಭಾರತೀಯ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ. Part - 1 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 10.03.2016

Part - 2 ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : 14.03.2016 ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ವೆಬ್‌ಸೈಟ್ www.ssc.nic.in

## ಹಿರಿಯ ನಾಗರಿಕರಿಗೆ ಗುರುತಿನ ಚೀಟಿ ವಿತರಣೆ

ಕರ್ನಾಟಕ ಸರ್ಕಾರ ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಮೈಸೂರು ಜಿಲ್ಲಾ ವ್ಯಾಪ್ತಿಯಲ್ಲಿ ವಾಸಿಸುತ್ತಿರುವ 60 ವರ್ಷ ವಯಸ್ಸಾಗಿರುವ ಹಿರಿಯ ನಾಗರಿಕರಿಗೆ ಇಲಾಖೆಯ ಅನುಸಾರ ಗುರುತಿನ ಚೀಟಿಯನ್ನು ವಿತರಿಸಲು ಗಾರ್ಡ್ ಸಂಸ್ಥೆಗೆ ಅನುಮತಿ ನೀಡಿದ್ದಾರೆ. ಜಿಲ್ಲೆಯ ಹಿರಿಯ ನಾಗರಿಕರು ಗುರುತಿನ ಚೀಟಿ ಪಡೆಯುವಂತೆ ಗಾರ್ಡ್ ಸಂಸ್ಥೆಯ ಕಾರ್ಯದರ್ಶಿ ಎಂ.ಎಲ್. ಸುದರ್ಶನ ರಾಜು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಮೊ. ಸಂ. 8884430221 ಸಂಪರ್ಕಿಸಬಹುದು.

## ಅರ್ಜಿಆಹ್ವಾನ

ಚಿತ್ರದುರ್ಗದಲ್ಲಿ ನಿರುದ್ಯೋಗಿ ಯುವತಿಯರಿಗಾಗಿ ಸ್ವಉದ್ಯೋಗ ಮಾಡಲು ಈ ಕೆಳಕಂಡ ತರಬೇತಿಯನ್ನು 21ನೇ ಮಾರ್ಚ್ 2016ರಿಂದ ಪ್ರಾರಂಭಿಸಲು ಯೋಜಿಸಲಾಗಿದೆ. ಟೈಲರಿಂಗ್ (ಸಿದ್ದ ಉಡುಪು ತಯಾರಿಕೆ ಮಹಿಳೆಯರಿಗಾಗಿ) 30 ದಿನಗಳ ತರಬೇತಿ ನೀಡಲಾಗುತ್ತಿದೆ. ಅಭ್ಯರ್ಥಿಗಳ ಅರ್ಹತೆ 18ರಿಂದ 45 ವರ್ಷಗಳ ವಯೋಮಿತಿಯನ್ನು ಹೊಂದಿರಬೇಕು. ಕನ್ನಡ ಓದು ಬರಹ ಬಲ್ಲವರಾಗಿರಬೇಕು.

ಉದ್ಯೋಗ ಮಾಡಬೇಕೆಂಬ ಆಸಕ್ತಿ ಹೊಂದಿರಬೇಕು. ತರಬೇತಿಯು ಊಟ ಮತ್ತು ವಸತಿ ಸಹಿತವಾಗಿ ಸಂಪೂರ್ಣವಾಗಿ ಉಚಿತವಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು ತಮ್ಮ ಫೋನ್, ಮೊಬೈಲ್ ನಂಬರ್‌ವುಳ್ಳ ಸ್ವವಿಳಾಸದೊಂದಿಗೆ ಅರ್ಜಿಯನ್ನು ಚಿತ್ರದುರ್ಗ ರುಡ್‌ಸೆಟ್ ಸಂಸ್ಥೆಯ ಕಛೇರಿಗೆ ನೇರವಾಗಿ ಅಥವಾ ಪೋಸ್ಟ್ ಮೂಲಕ ದಿನಾಂಕ 10.03.2016ರ ಒಳಗೆ ಸಲ್ಲಿಸಲು ಕೋರಿದೆ. ತರಬೇತಿಗೆ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನೇರ ಸಂದರ್ಶನದ ಮೂಲಕ ನಡೆಸಲಾಗುವುದು. ಹೆಚ್ಚಿನ ಮಾಹಿತಿಗಾಗಿ: 9449628776/08194–223505 ಸಂಪರ್ಕಿಸಬಹುದು.

## ಚಿತ್ರ ಸುದ್ದಿ – ಚಿತ್ರವನ್ನು ನೋಡಿ ಆನಂದಿಸಿ



ಕೃಷ್ಣರುಕ್ಕು ಕನ್ನಡ ಚಲನ ಚಿತ್ರದಲ್ಲಿ ಬರುವ ಸನ್ನಿವೇಶದ ಚಿತ್ರ.



ಕೃಷ್ಣರುಕ್ಕು ಕನ್ನಡ ಚಲನ ಚಿತ್ರದಲ್ಲಿ ಬರುವ ಮತ್ತೊಂದು ಸನ್ನಿವೇಶದ ಚಿತ್ರ.



ಟೈಸನ್ ಚಿತ್ರದಲ್ಲಿ ಕಂಡು ಬರುವ ದೃಶ್ಯ



ಟೈಸನ್ ಚಿತ್ರದಲ್ಲಿ ಬರುವ ಮತ್ತೊಂದು ಸನ್ನಿವೇಶದ ಚಿತ್ರ.



ಮರೆಯಲಾರೆ ಕನ್ನಡ ಚಲನ ಚಿತ್ರದಲ್ಲಿ ಬರುವ ಒಂದು ದೃಶ್ಯ



ಮರೆಯಲಾರೆ ಕನ್ನಡ ಚಲನ ಚಿತ್ರದಲ್ಲಿ ಬರುವ ಮತ್ತೊಂದು ಸನ್ನಿವೇಶದ ಚಿತ್ರ.

## ನೌಕರಿಗಾಗಿ ಆಪೇಕ್ಷೆ ಪಡುವ ಅಭ್ಯರ್ಥಿಗಳು

| ಹೆಸರು | ಸ್ಥಳ | ವಿದ್ಯಾಭ್ಯಾಸ | ಅನುಭವ | ಅಪೇಕ್ಷಿತ ವೇತನ |
|---|---|---|---|---|
| ಸುಮ | ಮೈಸೂರು | ಬಿ.ಎ, ಕಂಪ್ಯೂಟರ್ ಜ್ಞಾನವಿದೆ. | 2 ವರ್ಷ ಕ್ಲರಿಕಲ್ ಆಗಿ ಅನುಭವ | 10,000/– |
| ಭಾರತಿ | ಮೈಸೂರು | ಬಿ.ಎ, ಕಂಪ್ಯೂಟರ್ ಜ್ಞಾನವಿದೆ. | 4 ವರ್ಷ ಕ್ಯಾಷಿಯರ್ ಅನುಭವ | 10,000/– |
| ಮಂಜುಳಮ್ಮ | ಮೈಸೂರು | ಪಿಯುಸಿ, | 3 ವರ್ಷ ಇಂಡಸ್ಟ್ರಿಯಲ್ಲಿ ಅನುಭವ | 10,000/– |
| ರಂಜಿತ | ಮೈಸೂರು | ಪಿಯುಸಿ ಕಂಪ್ಯೂಟರ್ ಜ್ಞಾನವಿದೆ. | ಅನುಭವ ಇಲ್ಲ | 8,000/– |
| ಗುಣವತಿ | ಮೈಸೂರು | ಬಿಎಸ್ಸಿ, ಕಂಪ್ಯೂಟರ್ ಜ್ಞಾನವಿದೆ. | 6 ವರ್ಷ ಟೆಕ್ನಿಸಿಯನ್ ಅನುಭವ | 15,000/– |
| ಪಂಕಜ | ನಂಜನಗೂಡು | ಬಿ.ಎ, ಕಂಪ್ಯೂಟರ್ ಜ್ಞಾನವಿದೆ. | 4 ವರ್ಷ ಕ್ಲರಿಕಲ್ ಆಗಿ ಅನುಭವ | 10,000/– |
| ಮಾಲತಿ | ನಂಜನಗೂಡು | ಬಿ.ಎ, ಕಂಪ್ಯೂಟರ್ ಜ್ಞಾನವಿದೆ. | 1 ವರ್ಷ ಕ್ಲರಿಕಲ್ ಆಗಿ ಅನುಭವ | 8,000/– |
| ಮಾಧುರಿ | ನಂಜನಗೂಡು, | ಬಿ.ಇ,(ಪಿಎಸ್) ಕಂಪ್ಯೂಟರ್ ಜ್ಞಾನವಿದೆ. | ಅನುಭವ ಇರುವುದಿಲ್ಲ | 15,000/– |
| ರಾಣಿ | ಎಸ್. ಪಟ್ಟಣ | ಬಿ.ಇ, (ಪಿಎಸ್) ಕಂಪ್ಯೂಟರ್ ಜ್ಞಾನವಿದೆ. | ಅನುಭವ ಇರುವುದಿಲ್ಲ | 15,000/– |
| ಭವ್ಯ | ಎಸ್. ಪಟ್ಟಣ | ಬಿ.ಎ,ಬಿಎಡ್ | 2 ವರ್ಷ ಶಿಕ್ಷಕಿಯಾಗಿ ಅನುಭವ | 12,000/– |
| ಮಮತ | ಬನ್ನೂರು | ಪಿಯು,ಡಿಎಡ್, ಕಂಪ್ಯೂಟರ್ ಜ್ಞಾನವಿದೆ. | 6 ವರ್ಷ ಶಿಕ್ಷಕಿಯಾಗಿ ಅನುಭವ | 10,000/– |
| ಯಶೋಧ | ಸಿಂಧುವಳ್ಳಿ | ಪಿಯು, ಹಿಂದಿ ಡಿಗ್ರಿ, ಕಂಪ್ಯೂಟರ್ ಜ್ಞಾನವಿದೆ. | ಅನುಭವ ಇರುವುದಿಲ್ಲ | 10,000/– |

ಯಾವುದೇ ಕಛೇರಿ ಸಂಸ್ಥೆಯಲ್ಲಿ ಕೆಲಸ ಮಾಡಲು ಅಭ್ಯರ್ಥಿಗಳು ಅವಶ್ಯಕತೆಯಿದ್ದಲ್ಲಿ ನಮ್ಮ ಕಾರ್ಯಾಲಯವನ್ನು ಸಂಪರ್ಕಿಸಿದರೆ ಅಭ್ಯರ್ಥಿಗಳ ವಿವರ ಹಾಗೂ ಅವಶ್ಯಕ ಮಾಹಿತಿಗಳನ್ನು ಕಳುಹಿಸಿ ಕೊಡಲಾಗುವುದು. ಅವಶ್ಯಕತೆ ಇದ್ದವರು ಮಾತ್ರ ನಮ್ಮನ್ನು ಸಂಪರ್ಕಿಸಿ ಅಭ್ಯರ್ಥಿಗಳಿಗೆ ಕೆಲಸವನ್ನು ನೀಡಲು ಮುಂದೆ ಬರುವವರಿಗೆ ಸದಾ ಕೈಜೋಡಿಸಲಾಗುವುದು. ಅಭ್ಯರ್ಥಿಗಳು ಸಹಾ ನಮ್ಮ ಸಲಹೆ ಸೂಚನೆಯನ್ನು ಪಾಲಿಸಿದಲ್ಲಿ ನಿಮಗೆ ಉದ್ಯೋಗ ದೊರೆಯಲಿದೆ.

## ಸುಖ ಪ್ರಯಾಣ ಜತೆ ಶುಚಿ ಆಹಾರ

ರುಚಿಶುಚಿಯಾದ ಆಹಾರ ಒದಗಿಸುವ ಮೂಲಕ ಪ್ರಯಾಣಿಕರ ಮನ ತಣಿಸಲು ರೈಲ್ವೆ ಇಲಾಖೆ ಮುಂದಾಗಿದೆ. ಗ್ರಾಹಕರಿಗೆ ಗುಣಮಟ್ಟದ ಆಹಾರ ಒದಗಿಸಲು ರೈಲ್ವೆ ನಿಲ್ದಾಣಗಳಲ್ಲಿ ಕೇಟರಿಂಗ್ ವ್ಯವಸ್ಥೆಯ ಜತೆಗೆ ಆಹಾರ ಮಳಿಗೆಗಳನ್ನು ತೆರೆಯಲು ನಿರ್ಧರಿಸಲಾಗಿದೆ. ಕೇಟರಿಂಗ್ ಸೇವೆಯ ನಿರ್ವಹಣೆಯ ಹೊಣೆಯನ್ನು ಭಾರತೀಯ ರೈಲ್ವೆ ಆಹಾರ ಪೂರೈಕೆ ಮತ್ತು ಪ್ರವಾಸೋದ್ಯಮ ನಿಗಮ (ಐಆರ್‌ಸಿಟಿಸಿ) ಕ್ಕೆ ವಹಿಸಲಾಗಿದೆ. ಆಹಾರ ತಯಾರಿಕೆ ಹಾಗೂ ಹಂಚಿಕೆ ವಿಭಾಗಗಳು ಪ್ರತ್ಯೇಕವಾಗಿ ಕಾರ್ಯನಿರ್ವಹಿಸಲಿವೆ.

ಪ್ರಯಾಣಿಕರಿಗೆ ಹಾಲಿನ ಉತ್ಪನ್ನಗಳಿಂದ ಹಿಡಿದು ಔಷಧಗಳ ತನಕ ಎಲ್ಲವನ್ನೂ ಒದಗಿಸುತ್ತವೆ. ಪ್ರಸ್ತುತ ಏಕೋಪಯೋಗಿ ಮಳಿಗೆಗಳಿಗೆ ಮಾತ್ರ ಅನುಮತಿಯಿದೆ. ಪ.ಜಾ, ಪ.ಪಂ. ಹಿಂ, ವರ್ಗ, ಮಹಿಳೆಯರು, ಅಂಗವಿಕಲರು ಮತ್ತಿತರರಿಗೆ ಕೇಟರಿಂಗ್ ಘಟಕಗಳಲ್ಲಿ ಮೀಸಲಾತಿ ನೀಡಲು ನಿರ್ಧರಿಸಲಾಗಿದೆ. ಜತೆಗೆ ರೈಲ್ವೆ ನಿಲ್ದಾಣಗಳ ಮಳಿಗೆಗಳಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಲಾಗುವುದು.

## ಸಮನ್ವಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆ

ಕರ್ನಾಟಕ ಪೌಢಶಿಕ್ಷಣ ಪರೀಕ್ಷಾ ಮಂಡಳಿ ನಡೆಸಿದ ಡ್ರಾಯಿಂಗ್ ಹೈಯರ್ ಗ್ರೇಡ್ ಪರೀಕ್ಷೆಯಲ್ಲಿ ನಗರದ ಎಸ್‌ಜೆಸಿಇ ಕ್ಯಾಂಪಸ್ ಆವರಣದ ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ 9ನೇ ತರಗತಿ ವಿದ್ಯಾರ್ಥಿನಿ ಸಮನ್ವಿ ಎಸ್. ಸ್ವಾಮಿ 600ಕ್ಕೆ 521 ಅಂಕ (ಶೇ. 87) ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.



## ಮಹಾರಾಣಿ ಕಾಲೇಜಿಗೆ ಕಂಚಿನ ಪದಕ

ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ಹಾಗೂ ಸ್ನಾತಕೋತ್ತರ ಕ್ರೀಡಾಮಂಡಳಿ ಸಹಯೋಗದಲ್ಲಿ ಆಯೋಜಿಸಲಾಗಿದ್ದ ಮೈಸೂರು ವಿವಿ ಅಂತರ ಕಾಲೇಜು ಅಂತರವಲಯ ಮಹಿಳೆಯರ ಟೇಬಲ್ ಟೆನ್ನಿಸ್ ಸ್ಪರ್ಧೆಯಲ್ಲಿ ಮಹಾರಾಣಿ ಮಹಿಳಾ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜಿನ ವಿದ್ಯಾರ್ಥಿನಿಯರ ತಂಡ ಕಂಚಿನ ಪದಕ ಪಡೆದುಕೊಂಡಿದೆ. ಫೆ. 24 ರಿಂದ 26 ರವರೆಗೆ ಮೈಸೂರು ವಿವಿ ಸ್ಪೋರ್ಟ್ಸ್ ಪೆವಿಲಿಯನ್‌ನಲ್ಲಿ ನಡೆದ ಟೇಬಲ್ ಟೆನ್ನಿಸ್ ಪಂದ್ಯಾವಳಿಯಲ್ಲಿ ಕಾಲೇಜಿನ ವಿದ್ಯಾರ್ಥಿನಿಯರಾದ ಗೀತಾ, ಮಾನಸ, ಮೇಘನ, ಕೋಮಲ, ಭಾಗವಹಿಸಿದ್ದರು. ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಜಯರಾಮು ತಂಡದ ನೇತೃತ್ವ ವಹಿಸಿದ್ದರು. ಈ ಪಂದ್ಯಾವಳಿಯಲ್ಲಿ ಪಾಲ್ಗೊಂಡು ಕಂಚಿನ ಪದಕ ಗೆಲ್ಲುವ ಮೂಲಕ ಕಾಲೇಜಿಗೆ ಕೀರ್ತಿ ತಂದ ವಿದ್ಯಾರ್ಥಿನಿಯರ ತಂಡ ಹಾಗೂ ದೈಹಿಕ ಶಿಕ್ಷಣ ನಿರ್ದೇಶಕರನ್ನು ಪ್ರಾಂಶುಪಾಲ ಪ್ರೋ. ಎಂ.ಶಿವಣ್ಣ ಅಭಿನಂದಿಸಿದ್ದಾರೆ.

## ದೇಶದಲ್ಲಿ 76.6 ಲಕ್ಷ ಜನರಿಂದ ಗ್ಯಾಸ್ ಸಬ್ಸಿಡಿ ಗಿವ್ ಇಟ್ ಅಪ್





ಪ್ರಧಾನಿ ನರೇಂದ್ರ ಮೋದಿ ಕರೆಯ ಮೇರೆಗೆ ದೇಶದಲ್ಲಿ ಇದುವರೆಗೆ ಒಟ್ಟು 76.6 ಲಕ್ಷ ಜನ ಎಲ್‌ಪಿಜಿ ಸಿಲಿಂಡರ್ ಮೇಲಿನ ಸಬ್ಸಿಡಿ ಬಿಟ್ಟು ಕೊಟ್ಟಿದ್ದಾರೆ. ಅವರ ಪೈಕಿ 60 ಲಕ್ಷ ಜನ ಬಡವರಿಗೆ ಎಲ್‌ಪಿಜಿ ಸಂಪರ್ಕ ಕಲ್ಪಿಸಲಾಗಿದೆ ಎಂದು ಬ್ಯಾಡ್ಮಿಂಟನ್ ಪಟು ಹಾಗೂ ಭಾರತ್ ಪೆಟ್ರೋಲಿಯಂ ಕುಟುಂಬದ ಸದಸ್ಯ ಸೈನಾ ನೆಹ್ವಾಲ್ ಹೇಳಿದರು. ಶುಕ್ರವಾರ ನಗರದ ರೆಸಿಡೆನ್ಸಿ ರಸ್ತೆಯಲ್ಲಿರುವ ನಾಗಪಾಲ್ ಗ್ಯಾರೇಜ್ ಬಿಪಿಸಿಎಲ್ ಪೆಟ್ರೋಲ್ ಪಂಪ್ ಆವರಣದಲ್ಲಿ ಆಯೋಜಿಸಲಾಗಿದ್ದ ಗಿವ್ ಇಟ್ ಅಪ್ (ಎಲ್‌ಪಿಜಿ ಸಬ್ಸಿಡಿ ತ್ಯಜಿಸಿ) ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಪ್ರಧಾನಿ ಸಬ್ಸಿಡಿ ತ್ಯಜಿಸುವಂತೆ ಕರೆ ನೀಡುವುದನ್ನು ನಾನು ಶ್ಲಾಘಿಸುತ್ತೇನೆ. ಅವರ ಕರೆಯಿಂದಾಗಿ ಇದುವರೆಗೆ ದೇಶದಲ್ಲಿ 60 ಲಕ್ಷ ಬಿಪಿಎಲ್ ಕುಟುಂಬಗಳಿಗೆ ಉಚಿತವಾಗಿ ಎಲ್‌ಪಿಜಿ ಸಿಲಿಂಡರ್ ನೀಡಲಾಗುತ್ತಿದೆ. ನಾನು ಸಬ್ಸಿಡಿ ತ್ಯಜಿಸಿದ್ದರಿಂದ ಕಾಶ್ಮೀರದಲ್ಲಿರುವ ಬಡ ಕುಟುಂಬದ ರಾಜೇಶ್ ಕಿಶ್ವರ್ ಎಲ್‌ಪಿಜಿ ಸಿಲಿಂಡರ್ ಪಡೆದಿದ್ದಾರೆ. ಅದು ನನಗೆ ನಿಜಕ್ಕೂ ಸಂತಸ ತಂದಿದೆ ಎಂದು ನೆಹ್ವಾಲ್ ಹರ್ಷ ವ್ಯಕ್ತಪಡಿಸಿದರು.

## ಸ್ನೇಹ ಬಳಗದ ವತಿಯಿಂದ ಸಾರ್ವಜನಿಕರಿಗೆ ದೇಶೀ ಆಟ

ಪಟ್ಟಣದ ಶ್ರೀ ಚಂದ್ರಮೌಳೇಶ್ವರ ಸ್ವಾಮಿಯವರ 83ನೇ ದನಗಳ ಜಾತ್ರೆ, ವಸ್ತು ಪ್ರದರ್ಶನ ಹಾಗೂ ಕೃಷಿ ಮೇಳ ಮುಕ್ತಾಯ ಸಮಾರಂಭದ ಪ್ರಯುಕ್ತ ಪುರಸಭೆ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಮತ್ತು ಸ್ನೇಹ ಬಳಗದ ವತಿಯಿಂದ ಸಾರ್ವಜನಿಕರಿಗೆ ದೇಸಿ ಆಟಗಳನ್ನು ನಡೆಸಲಾಯಿತು. ಈ ಸಂದರ್ಭದಲ್ಲಿ ಪುರಸಭಾ ಮಾಜಿ ಅಧ್ಯಕ್ಷರುಗಳಾದ ಮಂಜಣ್ಣ, ನಟರಾಜ್ ಸಿಬ್ಬಂದಿ ವರ್ಗದವರಾದ ಶಿವಾನಂದ, ಸಿಪ್ಪೇಗೌಡ, ರಾಜೇಶ್, ವೆಂಕಟೇಶ್ ಹಾಗೂ ಕೆ.ವಿ. ಮಂಜುನಾಥ್ ಇತರರು ಆಟೋಟಗಳಲ್ಲಿ ಭಾಗವಹಿಸಿದ್ದರು.

## ಸಾಕ್ಷ್ಯಚಿತ್ರ ನಿರ್ಮಾಣಕ್ಕೆ ಅರ್ಜಿ ಆಹ್ವಾನ

ಕರ್ನಾಟಕ ಜಾನಪದ ಅಕಾಡೆಮಿಯ ಎಸ್‌ಸಿ–ಎಸ್‌ಟಿ ಹಿರಿಯ ಜಾನಪದ ಕಲಾವಿದರು, ಅಕಾಡೆಮಿ, ರಾಜ್ಯೋತ್ಸವ, ಜಾನಪದಶ್ರೀ ಪ್ರಶಸ್ತಿ ಪಡೆದಿರುವ ಜಾನಪದ ಕಲಾವಿದರ ಆತ್ಮಕಥನವುಳ್ಳ ಸಾಕ್ಷ್ಯಚಿತ್ರ ನಿರ್ಮಿಸುತ್ತಿದೆ. ನಿರ್ದೇಶನ, ತಾಂತ್ರಿಕ ಪರಿಣಿತಿ ಹೊಂದಿರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದವರು ಅಭ್ಯರ್ಥಿಗಳು ಅರ್ಜಿಯನ್ನು ಮಾರ್ಚ್ 8 ರೊಳಗಾಗಿ ಸಲ್ಲಿಸಬೇಕು. ಮಾಹಿತಿಗೆ ದೂರವಾಣಿ ಸಂಖ್ಯೆ : 080–22215509ನ್ನು ಸಂಪರ್ಕಿಸಬಹುದು.

## ಅರ್ಜಿ ಆಹ್ವಾನ

ಕಡ್ಡಾಯ ಶಿಕ್ಷಣ ಕಾಯ್ದೆಯಡಿ (ಆರ್‌ಟಿಇ) ಗ್ರಾಮೀಣ ವಸತಿ ಪ್ರದೇಶ ಮತ್ತು ನಗರವಾರ್ಡ್ ವ್ಯಾಪ್ತಿಯ ಖಾಸಗಿ ಅನುದಾನ ರಹಿತ ಶಾಲೆಗಳಲ್ಲಿ ದುರ್ಬಲ. ಹಿಂದುಳಿದ ಮತ್ತು ಅವಕಾಶವಂಚಿತ ಮಕ್ಕಳಿಗಾಗಿ 2016–17ನೇ ಸಾಲಿನ ಶೇ. 25ರಷ್ಟು ಉಚಿತ ಶಿಕ್ಷಣ ನೀಡುವ ಸಂಬಂಧ ಆನ್‌ಲೈನ್ ಮತ್ತು ಆಫ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು ಮಾರ್ಚ್ 25 ಕೊನೆ ದಿನ ಹೆಚ್ಚಿನ ಮಾಹಿತಿಗಾಗಿ ಮೊ : 8453652939 ಸಂಪರ್ಕಿಸಬಹುದು.

## ಗ್ರಾಮೀಣ ಮಹಿಳೆಯರ ಸ್ವಾವಲಂಬನೆಗೆ ಹೈನುಗಾರಿಕೆ ಪೂರಕ



ಗ್ರಾಮೀಣ ಭಾಗದ ಮಹಿಳೆಯರ ಸ್ವಾವಲಂಬನೆಗೊಳಿಸಲು ಹೈನುಗಾರಿಕೆ ಪೂರಕವಾಗಿದೆ ಎಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಮಂಜುಳ ಮಾನಸ ತಿಳಿಸಿದರು. ಸಾಡೊಳಲು ಗ್ರಾಮದಲ್ಲಿ ಪಶು ಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ ಹಾಗೂ ಮೆಲ್‌ಸ್ವನ್ ಕಾರ್ಪ್ ಕಾರ್ಖಾನೆ ವತಿಯಿಂದ ಬರಡುರಾಸು ತಪಾಸಣಾ ಶಿಬಿರ, ಕರುಗಳು, ಪ್ರದರ್ಶನ, ಸಾಮಾನ್ಯ ಚಿಕಿತ್ಸೆ ಮತ್ತು ಔಷಧಿ ವಿತರಣೆ, ಮಹಿಳಾ ಸಬಲೀಕರಣ ಯೋಜನೆಯಡಿಯಲ್ಲಿ ಕಾಮಧೇನು ಉಚಿತ ಹಸು–ಕರು ಹಾಗೂ ಹೊಲಿಗೆ ಯಂತ್ರ ಹಾಗೂ ಶಾಲಾ ಮಕ್ಕಳಿಗೆ ಶುದ್ಧ ಕುಡಿಯುವ ನೀರಿನ ಯಂತ್ರ ವಿತರಣಾ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.


**ಶಿರಡಿ ಯಾತ್ರೆ ಆಸಕ್ತರು ಸಂಪರ್ಕಿಸಿ**



**ದಿನಾಂಕ : 15.04.2016 ಒಬ್ಬರಿಗೆ ರೂ. 6300./–**
**5 ರಾತ್ರಿ 6 ಹಗಲು ಕೊಲ್ಲಾಪುರ, ಪಂಡರಾಪುರ, ಶಿರಡಿ, ತ್ರಯಂಬಕೇಶ್ವರ, ಶನಿಸಿಂಗಾನಾಂಥ್‌ಪುರ್, ನಾಸಿಕ್, ಪಂಚವಟಿ, ಬಿಜಾಪುರ, ಕೂಡಲಸಂಗಮ, ಸಸ್ಯಹಾರಿ ತಿಂಡಿ, ಊಟ, ಮಿನರಲ್ ವಾಟರ್, 4 ಶೇರಿಂಗ್ ರೂಂ, ಲಕ್ಸುರಿ ಬಸ್ಸು ಎಲ್ಲಾ ಖರ್ಚುಗಳನ್ನು ಒಳಗೊಂಡಿರುತ್ತದೆ.**
**ವಸಂತ ಟ್ರಾವೆಲ್ಸ್**
**ನಂ. 279, 9ನೇ ಕ್ರಾಸ್, ಜಿ ಬ್ಲಾಕ್, ರಾಮಕೃಷ್ಣನಗರ, ಮೈಸೂರು ಫೋನ್ : 9845749994**


## ಶೃತಿಭಾಸ್ಕರ್ ವೆಡ್ಸ್ ತಮಿಳ್ ಆ್ಯಕ್ಟರ್ ನಕುಲ್



ಶೃತಿಭಾಸ್ಕರ್ ತನ್ನ ಬಾಯ್ ಫ್ರೆಂಡ್ ಆದ ತಮಿಳು ಚಿತ್ರ ರಂಗದ ನಟ ನಕುಲ್ ಅವರನ್ನು 28.02.2016 ರಂದು ವಿಜೃಂಭಣೆಯಿಂದ ವಿವಾಹವನ್ನು ಮಾಡಿಕೊಂಡರು. ಎರಡು ಕಡೆಯ ಕುಟುಂಬವರ್ಗ ಹಾಗೂ ಕೆಲವೇ ಸ್ನೇಹ ಬಳಗ ಸೇರಿದ್ದವು. ನವ ಹೊಸ ಜೋಡಿಗೆ ಮಹಿಳಾ ವಿಶೇಷ ಬಳಗದಿಂದ ನೂರು ಕಾಲ ನೆಮ್ಮದಿ ಹಾಗೂ ಶಾಂತಿಯಿಂದ ಬಾಳಲಿ ಎಂದು ಹಾರೈಸುತ್ತದೆ.



## ಮಾ. 2 ರಿಂದ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್

ಬಹು ನಿರೀಕ್ಷಿತ ಮೂವತ್ತೇಳನೇ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ 2016 ಮಾ. 2 ರಿಂದ 6 ವರೆಗೆ ನಗರದಲ್ಲಿ ನಡೆಯಲಿದೆ. ಸುಮಾರು 20 ವರ್ಷಗಳ ನಂತರ ಇದೇ ಮೊದಲಬಾರಿಗೆ ನಗರದಲ್ಲಿ ನಡೆಯುತ್ತಿರುವ ಈ ರಾಷ್ಟ್ರೀಯ ಮಾಸ್ಟರ್ಸ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ದೇಶದ ವಿವಿಧ ರಾಜ್ಯಗಳಿಂದ 35 ರಿಂದ 95 ವರ್ಷಕ್ಕೂ ಮೇಲ್ಪಟ್ಟ ಸುಮಾರು 4,000 ಪುರುಷ ಹಾಗೂ ಮಹಿಳಾ ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಎಂದು ಮಾಸ್ಟರ್ಸ್ ಅಥ್ಲೆಟಿಕ್ಸ್ ಫೆಡರೇಷನ್ ಆಫ್ ಇಂಡಿಯಾದ ಪ್ರಧಾನ ಕಾರ್ಯದರ್ಶಿ ಡಿ.ಡೇವಿಡ್ ಪ್ರೇಮನಾಥ್ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದರು.

## ಚಿತ್ರಕಲಾ ಶಿಬಿರ

ಬೆಂಗಳೂರಿನ ಹೆಚ್‌ಸಿಬಿ ಫೌಂಡೇಷನ್ ಮತ್ತು ಸ್ವಸ್ತಿ ಆರ್ಟ್ ಗ್ಯಾಲರಿವತಿಯಿಂದ ಫೆ. 29 ರಿಂದ ಮಾರ್ಚ್ 6 ರವರೆಗೆ ಭಾರತ್ ಕ್ಯಾನ್ಸರ್ ಆಸ್ಪತ್ರೆಯ ಕಲಾಭವನದಲ್ಲಿ ಚಿತ್ರಕಲಾ ಶಿಬಿರವನ್ನು ಆಯೋಜಿಸಲಾಗಿದೆ.



ಬೆಂಗಳೂರು ಕ್ಲಬ್‌ನಲ್ಲಿ ಹಳೆಯ ಕಾರುಗಳ ಪ್ರದರ್ಶನದಲ್ಲಿ ಬಂದಿದ್ದ ಒಂದು ಕಾರು



ಬೆಂಗಳೂರು ಕೋಟೆಯಲ್ಲಿ ಕಲ್ಲಿನಿಂದ ಕೆತ್ತಿರುವ ಮನಮೋಹಕ ಚಿತ್ರ




**ಶ್ರೀ ಲಕ್ಷ್ಮೀ ಮಹಿಳಾ ತರಬೇತಿ ಸಂಸ್ಥೆ**
ಯುವತಿಯರಿಗಾಗಿ ಟೈಲರಿಂಗ್, ಫ್ಯಾಷನ್ ಡಿಸೈನಿಂಗ್, ಬ್ಯೂಟಿಷಿಯನ್ ಕೋರ್ಸ್ ಕಸೂತಿ ಕೆಲಸ, ಮೆಹಂದಿ ಇತ್ಯಾದಿ ಕೋರ್ಸ್‌ಗಳಿಗೆ
ಸಂಪರ್ಕಿಸಿ ಮೊ :9611066634



**ಮಹಿಳಾ ವಿಶೇಷ**
ಕನ್ನಡ ಮಹಿಳಾ ಸುದ್ದಿಯ ಏಕೈಕ ವಾರ ಪತ್ರಿಕೆ (ಪ್ರತಿ ಮಂಗಳವಾರ)
ಮೈಸೂರು ಕಛೇರಿ : C/o ಜನಶ್ರೀ ಸೋಲಾರ್
ಸಂಖ್ಯೆ : ಸಿ.ಹೆಚ್. 52, 7ನೇ ಮುಖ್ಯ ರಸ್ತೆ, 5ನೇ ಕ್ರಾಸ್, ಸರಸ್ವತಿಪುರಂ,
(ಸಿಂಡಿಕೇಟ್ ಬ್ಯಾಂಕ್ ಹಾಗೂ ವಿಜಯಾಬ್ಯಾಂಕ್ ಮಧ್ಯೆ)
ಮೈಸೂರು – 570 009
**ಹೆಚ್.ವಿ. ವೆಂಕಟಸುಬ್ಬರಾವ್, ಸಂಪಾದಕರು 8880334444**
(ಸಾರ್ವಜನಿಕ ಶಿಕ್ಷಣ ಇಲಾಖೆ ನಿವೃತ್ತ ನೌಕರ)
Email : mahilavishesha@yahoo.com web : www.mahilavishesha.in



Edited, Published & Owned by H.V.Venkatasubbarao, # 1021, 14th Cross, 2nd Stage, Hebbal, Mysore-570017 and Printed by B.C. Meera and Printed at Annapoorna Offset Printer, # 511, 14th Main, Saraswathipuram, Mysore - 570009 Published at # 1021, 14th Cross, 2nd Stage, Hebbal, Mysore - 570017 Mob.:8880334444, Email:mahilavishesha@yahoo.com
Web: www.mahilavishesha.in Editor: H.V. Venkatasubbarao, Decl.No.: MAG.90/2015-16